<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆಃ **1001/2025**</u>

<u>ಪಿರ್ಯಾದಿ</u> : ಶ್ರೀ ಹರೀಶ್.ಎಸ್,
ವಯಸ್ಸು ಸುಮಾರು 30 ವರ್ಷ,
ಬಿನ್ ಸುಂದರ ಪೂಜಾರಿ,
ವಾಸಃ ದಾರದಹಳ್ಳಿ ಗ್ರಾಮ ಮತ್ತು ಅಂಚೆ,
ಕಸಬಾ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

<u>ಆರೋಪಿ</u> : ಶ್ರೀ ಪ್ರದೀಪ್,
ವಯಸ್ಸು ಸುಮಾರು 38 ವರ್ಷ,
ಬಿನ್ ಶಂಕರ್ ಶೆಟ್ಟಿ,
ವಾಸಃ ಪೂರ್ಣಿಮಾ ಬ್ಯಾಂಗಲ್ ಸ್ಟೋರ್,
ಅಂಚೆ ಕಛೇರಿ ಹತ್ತಿರ, ಬೇಲೂರು ರಸ್ತೆ,
ಮೂಡಿಗೆರೆ ಪಟ್ಟಣ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

<u>ಆಪಾದನೆಯ ಸಾರಾಂಶ</u>

ಶ್ರೀ ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಪಿರ್ಯಾದುದಾರರನ್ನು ದಿನಾಂಕ 11.06.2024 ರಂದು ಸಂಪರ್ಕಿಸಿ, ನಿಮ್ಮ ಕುಟುಂಬದ ತುರ್ತು ಹಣದ ಅವಶ್ಯಕತೆಗಳಿಗಾಗಿ ಮತ್ತು ವ್ಯಾಪಾರಾದ ಸಲುವಾಗಿ ಅವರಿಂದ 6,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಇಂಡಿಯಾ, ಮೂಡಿಗೆರೆ ಶಾಖೆಯ ಚೆಕ್ ಸಂಖ್ಯೆಃ 161947, ದಿನಾಂಕ 28.02.2025, ರೂ.6,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಬ್ಯಾಂಕಿನಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 15.03.2025 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು

ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ **138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

**(**ದಿನಾಂಕ 10.11.2025 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ**)**

**Sd/-**

ಮೂಡಿಗೆರೆ
ದಿನಾಂಕಃ 10.11.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.